# ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 737

2 ಸದಸ್ಯರ ಹೆಸರು : ಯು.ಬಿ.ವೆಂಕಟೇಶ್(ನಾಮ ನಿರ್ದೇಶನ ಹೊಂದಿದವರು)

3 ಉತ್ತರಿಸಬೇಕಾದ ದಿನಾಂಕ : 13.07.2023

4 ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಹಿಂದಿನ ಸರ್ಕಾರದ ಅವಧಿಯಲ್ಲಿ ಪಿ.ಎಸ್.ಐ ಗಳ ಅಕ್ರಮ ನೇಮಕಾತಿ, ಬಿಟ್ ಕಾಯಿನ್ ಹಗರಣ, ಉಪನ್ಯಾಸಕರ ನೇಮಕಾತಿ ಹಗರಣಗಳ ಬಗ್ಗೆ ಪ್ರಸ್ತುತ ಸರ್ಕಾರ ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳೇನು; | 1) ಪಿ.ಎಸ್.ಐ. ಗಳ ಅಕ್ರಮ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ 17 ಪ್ರಕರಣಗಳು ದಾಖಲಾಗಿದ್ದು, ಇವುಗಳನ್ನು ಸಿ.ಐ.ಡಿ ಯಲ್ಲಿ ತನಿಖೆ ಕೈಗೊಂಡು 16 ಪ್ರಕರಣಗಳಲ್ಲಿ ಪ್ರಾಥಮಿಕ ದೋಷಾರೋಪಣಾ ಪಟ್ಟಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ. ಈ ಪ್ರಕರಣಗಳಲ್ಲಿ 110 ಆರೋಪಿಗಳನ್ನು ಬಂಧಿಸಲಾಗಿದ್ದು, ತನಿಖೆ ಮುಂದುವರೆದಿರುತ್ತದೆ.<br><br>2) ಬಿಟ್ ಕಾಯಿನ್ ಹಗರಣಕ್ಕೆ ಸಂಬಂಧಿಸಿದಂತೆ ಆರೋಪಿ ಶ್ರೀ ಕೃಷ್ಣ @ ಶ್ರೀಕಿ ಎಂಬುವವನನ್ನು ಕಾಟನ್‌ಪೇಟೆ ಪೊಲೀಸ್ ಠಾಣೆಯ ಮೊ.ಸಂ. 153/2020ರ ಪ್ರಕರಣದಲ್ಲಿ ವೆಬ್‌ಸೈಟ್ ಹ್ಯಾಕ್ ಮಾಡಿದ ಬಗ್ಗೆ ತಿಳಿದು ಬಂದಿದ್ದು ತನಿಖೆ ನಡೆಸಿ ದೋಷಾರೋಪಣಾ ಪಟ್ಟಿ ಸಲ್ಲಿಸಲಾಗಿದೆ. ಬಿಟ್ ಕಾಯಿನ್ ಪ್ರಕರಣದ ವಿಸ್ತೃತವಾದ ತನಿಖೆಗಾಗಿ ಅಪರ ಪೊಲೀಸ್ ಮಹಾನಿರ್ದೇಶಕರು, ಆರ್ಥಿಕ ಅಪರಾಧಗಳು, ಸಿ.ಐ.ಡಿ. ರವರ ನೇತೃತ್ವದಲ್ಲಿ ವಿಶೇಷ ತನಿಖಾ ತಂಡವನ್ನು (ಎಸ್.ಐ.ಟಿ) ರಚಿಸಲಾಗಿದೆ.<br><br>3) ಉಪನ್ಯಾಸಕರ ನೇಮಕಾತಿಯ ಹಗರಣಕ್ಕೆ ಸಂಬಂಧಿಸಿದಂತೆ ಶ್ರೀಮತಿ ರಮ್ಯ, ಕಾರ್ಯ ನಿರ್ವಾಹಕ ನಿರ್ದೇಶಕರು, ಕೆ.ಇ.ಎ. ಮಲ್ಲೇಶ್ವರಂ ರವರು ನೀಡಿದ ದೂರಿನ ಮೇರೆಗೆ ಮಲ್ಲೇಶ್ವರಂ ಪೊಲೀಸ್ ಠಾಣೆಯ ಮೊ.ಸಂ. 59/2022 ಕಲಂ: 418, 420, 120(ಬಿ) ರೆ/ವಿ 34 ಐಪಿಸಿ ಮತ್ತು ಕಲಂ: 66 ಐ.ಟಿ. ಕಾಯ್ದೆ ರೀತ್ಯಾ ಪ್ರಕರಣವು ದಾಖಲಾಗಿದ್ದು, ಪ್ರಸ್ತುತ ಪ್ರಕರಣವು ಸಿ.ಸಿ.ಬಿ. ವಿಶೇಷ ವಿಚಾರಣಾ ದಳ ಇಲ್ಲಿ ತನಿಖೆಯಲ್ಲಿರುತ್ತದೆ. ಪ್ರಕರಣದಲ್ಲಿ ಶ್ರೀಮತಿ ಸೌಮ್ಯ ಮತ್ತು ಪ್ರೊ. ನಾಗರಾಜು ರವರನ್ನು ಬಂಧಿಸಿದ್ದು, ಪ್ರಕರಣವು ಪ್ರಸ್ತುತ ಮಾನ್ಯ 1ನೇ ಎ.ಸಿ.ಎಂ.ಎಂ. ನ್ಯಾಯಾಲಯದ ಸಿ.ಸಿ. ನಂ: 20321/2022 ರಲ್ಲಿ ವಿಚಾರಣೆಯಲ್ಲಿದ್ದು, ಮುಂದಿನ ವಿಚಾರಣಾ ದಿನಾಂಕ: |

| | | |
|---|---|---|
| | | 14.07.2023 ರಂದು ಇರುತ್ತದೆ. ಹಾಗೂ ಡಾಕ್ಟರ್ ರಮೇಶ್ ಬಾಬು ಆರ್.ಕೆ. ಪ್ರಾದೇಶಿಕ ನಿರ್ದೇಶಕರ ಕಛೇರಿ, ಶಿಕ್ಷಣ ಇಲಾಖೆ ರವರು ನೀಡಿದ ದೂರಿನ ಮೇರೆಗೆ ವಿಧಾನಸೌಧ ಪೊಲೀಸ್ ಠಾಣೆಯ ಮೊ.ಸಂ. 65/2017 ಕಲಂ: 420, 465, 468, 471, 472 ರೆ/ವಿ 34 ಐಪಿಸಿ ರೀತ್ಯಾ ಪ್ರಕರಣವು ದಾಖಲಾಗಿದ್ದು, 10 ಜನ ಆರೋಪಿಗಳನ್ನು ಬಂದಿಸಿದ್ದು, ಪ್ರಕರಣವು ಪ್ರಸ್ತುತ ಮಾನ್ಯ 8ನೇ ಎ.ಸಿ.ಎಂ.ಎಂ. ನ್ಯಾಯಾಲಯದಲ್ಲಿ ಸಿ.ಸಿ. ನಂ. 28854/2018 ರಲ್ಲಿ ವಿಚಾರಣೆಯಲ್ಲಿರುತ್ತದೆ. |
| ಆ | ಈ ಸಂಬಂಧ ನಿಷ್ಪಕ್ಷಪಾತವಾದ ಉನ್ನತ ಮಟ್ಟದ ತನಿಖೆಯನ್ನು ನಡೆಸಲು ಉದ್ದೇಶಿಸಿದೆಯೇ; | ಹೌದು. ಈ ಕುರಿತು ಈಗಾಗಲೇ ಬಿಟ್ ಕಾಯಿನ್ ಪ್ರಕರಣದ ವಿಸ್ತೃತವಾದ ತನಿಖೆಗಾಗಿ ವಿಶೇಷ ತನಿಖಾ ತಂಡವನ್ನು (ಎಸ್.ಐ.ಟಿ) ರಚಿಸಲಾಗಿದೆ. |
| ಇ | ತಪ್ಪಿತಸ್ಥರ ವಿರುದ್ಧ ಆದಷ್ಟು ಶೀಘ್ರ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದೇ? | ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ: ಒಇ 82 ಪಿಇಐ 2023

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು